# ಸಾವಿನ ಅನುಭವ ಹೇಗಿರುತ್ತದೆ?

ಸಾವಿನ ಅನುಭವ ಅತ್ಯಂತ ಮಧುರವಾಗಿರುತ್ತದೆಯೆಂದು ಆಧ್ಯಾತ್ಮಿಗಳು ಹೇಳುತ್ತಾರೆ. ಅದೊಂದು ಬಿಡುಗಡೆಯ ಅನುಭವ, ಬಂಧನದಿಂದ ಹೊರ ಬಂದು ಸ್ವಾತಂತ್ರ್ಯದ ಸುಖಕ್ಕೆ ಚಲಿಸುವ ಅನುಭವವೆಂಬುದು ಅವರ ಅನಿಸಿಕೆ. ಆದ್ದರಿಂದ ನಮ್ಮ ಹಿರಿಯರು ತೀರಿಕೊಂಡಾಗ ಅಗಲಿಕೆಯ ದುಃಖವನ್ನು ವ್ಯಕ್ತಪಡಿಸುವುದು ಕೇವಲ ಅರಿವಿನ ಕೊರತೆಯಿಂದ ಉಂಟಾಗುವ ಒಂದು ಭಾವ ಕ್ರಿಯೆ. ಜನನ ಮರಣಗಳ ಮರ್ಮವನ್ನು ಅರಿತವರು ಈ ಸಂದರ್ಭದಲ್ಲಿ ಸಂತೋಷದಿಂದ ಸತ್ತ ವ್ಯಕ್ತಿಯ ದೇಹವನ್ನು ಕಳಿಸಿಕೊಡುತ್ತಾರೆ. ಈ ಅಳುವ ಕ್ರಿಯೆಯಾದರೂ ದೇಹದ ಸುತ್ತ ಸುತ್ತುವ ಭಾವ ಸಂಚಾರವೇ ಆಗಿರುತ್ತದೆ. ಆ ದೇಹದ ಸತ್ತ್ವವಾಗಿರುವ 'ಜೀವ' ಅಲ್ಲಿ ಇರುವುದೇ ಇಲ್ಲ! ಉಸಿರು ಇಲ್ಲದ ದೇಹಕ್ಕೆ ನಾವು ಮಾಡುವ ಕ್ರಿಯೆಗಳೆಲ್ಲವೂ ವ್ಯರ್ಥವೂ ಅರ್ಥರಹಿತವೂ ಎಂಬುದು ಬಹುಜನಕ್ಕೆ ತಿಳಿಯುವುದೇ ಇಲ್ಲ. ಇದನ್ನು ಅರ್ಥ ಮಾಡಿಕೊಂಡಿದ್ದ ಆದಿ ಮಾನವರಲ್ಲಿ ಕೆಲವು ಜನಾಂಗಗಳು ಅದನ್ನು ಬಯಲಲ್ಲೇ ನಿರ್ಮಮಕಾರದಿಂದ ತೊರೆಯುತ್ತಿದ್ದರು. ಆದರೆ ಆ ದೇಹ ಪ್ರಾಣಿಗಳಿಗೆ ಆಹಾರವಾಗದಿರಲೆಂದು ಕಲ್ಲುಗಳಿಂದ ಸಂರಕ್ಷಿಸುತ್ತಿದ್ದರು. ಅದನ್ನು ಅವರು ಮುಂದೆ 'ಕಲ್ಲುಸೇವೆ' ಎಂದು ಆಚರಣೆಯನ್ನಾಗಿಸಿಕೊಂಡರು.

ಸಾಯುವ ವ್ಯಕ್ತಿಗೆ ಸಾಯುವ ಸಂದರ್ಭದಲ್ಲಿ ಸುಖವೇ ದೊರಕಿರಬಹುದು; ಸಾಯುವ ಆನಂದಾನುಭೂತಿಯನ್ನು ಅವನು ಅನುಭವಿಸಿರಬಹುದು. ಬಹುಪಾಲು ಬದುಕನ್ನು ಅನುಭವಿಸಿ, ಬದುಕಿನ ಸಂಜೆಯಲ್ಲಿ ಸಾವಿನೊಡನೆ ಮುಖಾ ಮುಖಿಯಾಗಿ– ದೇಹದಿಂದ ಜೀವ ತೊರೆದ ವ್ಯಕ್ತಿಯ ಮುಖದ ಭಾವವನ್ನು ಗಮನಿಸಬೇಕು. ಆ ಸಂದರ್ಭದಲ್ಲಿ ದೇಹ ಕೃಶವಾಗಿರುತ್ತದೆ. ಅನ್ಯರ ಅವಲಂಬನೆ ಸ್ವಾಭಿಮಾನಕ್ಕೆ ಪದೆ ಪದೆ ಪೆಟ್ಟು ಕೊಡುತ್ತಿರುತ್ತದೆ. ದೇಹ ನಾನಾ ಬಗೆಯ ವ್ಯಾಧಿಗಳಿಂದ ನೋವು ಅನುಭವಿಸುತ್ತಿರುತ್ತದೆ. ಸದಾ ಸಾವಿನೊಡನೆ ನಡೆಸುವ ಮಾನವ ಪ್ರಯತ್ನ ವ್ಯರ್ಥವೆಂಬ ಸತ್ಯದ ಅರಿವು ಮೂಡಿರುತ್ತದೆ. ಆಗ ದೇಹದಿಂದ ಜೀವ ನಿರ್ಗಮಿಸುವ ಕ್ಷಣ ಆಗಮಿಸುತ್ತದೆ. ಅದರ ಅರಿವು ಜೀವಿಗೆ ಆಗುತ್ತದೆ. ಆಗ ಅವನಿಗೆ ನೋವಿನಿಂದ ಬಿಡುಗಡೆಯಾಗುವ ಸಂತೃಪ್ತ ಭಾವ– ನಿರಾಳತೆಯ ಭಾವ ಮೂಡುತ್ತದೆ. ನೋವಿನಿಂದ ನರಳುವಾಗಿನ ನರಗಳ ಬಿಗಿತ ಸಡಲವಾಗುತ್ತದೆ. ಮುಖದ ಸ್ನಾಯುಗಳು ಅರಳುತ್ತವೆ. ನಗುವಿನ, ಸಂತೋಷದ ಭಾವ ಮುಖದಲ್ಲಿ ಸುಳಿದಾಡುತ್ತದೆ. ಆದ್ದರಿಂದ ಸತ್ತವರ ಮುಖದಲ್ಲಿ ಎಲ್ಲರೂ ಮಗುವಿನ ನಗುವನ್ನು ಕಾಣುತ್ತಾರೆ. 'ನೋಡು, ಅವನ ಮುಖದಲ್ಲಿ ಸಂತೃಪ್ತವಾಗಿ ನಿದ್ದೆ ಮಾಡುತ್ತಿರುವ ಲಕ್ಷಣ ಕಾಣುತ್ತದೆ' ಎಂದು ಜನರು ಮಾತನಾಡಿಕೊಳ್ಳುತ್ತಾರೆ. ಮೇಲಿನ ಮಾತುಗಳೆಲ್ಲವೂ ಬದುಕನ್ನು ಪೂರ್ಣವಾಗಿ ಅನುಭವಿಸಿ, ಮುಪ್ಪನ್ನು ತಬ್ಬಿ, ಸಾವಿನ ಮುಕ್ತತೆಯನ್ನು ಪಡೆಯುವವರಿಗೆ ಅನ್ವಯಿಸುತ್ತವೆ. ಆದರೆ ಬದುಕಿನ ನಡುವೆ, ಅಸ್ವಾಭಾವಿಕವಾಗಿ ಸತ್ತವರಿಗೆ ಈ ಮಾತುಗಳನ್ನು ಹೇಳಲಾಗುವುದಿಲ್ಲ.

ಅಪಘಾತದಲ್ಲಿ ಸತ್ತವರು, ನಾನಾ ಕಾರಣಗಳಿಂದ ಆತ್ಮಹತ್ಯೆಗೆ ಶರಣಾದವರು– ಇಂಥವರ ಮುಖಗಳನ್ನು ಅವಲೋಕಿಸಿದಾಗ ಸಾವಿನ ಸಂತೃಪ್ತತೆ ಕಾಣುವುದಿಲ್ಲ. ಭಯ, ಸಂಕಟ, ನೋವು, ಅಸಹಾಯಕತೆ, ಭೀಕರತೆ ಕಣ್ಣಿಗೆ ರಾಚುತ್ತವೆ. ಅದು ಬಲವಂತವಾಗಿ ದೇಹದಿಂದ ಜೀವವನ್ನು ಬೇರ್ಪಡಿಸುವ ಕ್ರಿಯೆಯಿಂದಾಗಿ ಉದ್ಭವಿಸಿದ ಭಾವಾಭಿವ್ಯಕ್ತಿ. ಇನ್ನೂ ದೇಹ– ಜೀವಗಳ ಬೆಸುಗೆ ಬಲವಾಗಿರುತ್ತದೆ. ದೇಹ ಜೀವದ ಮೂಲಕ ಲೌಕಿಕವನ್ನು ಅನುಭವಿಸಿ ಆನಂದಿಸುವ ಪ್ರಕ್ರಿಯೆಯಲ್ಲಿರುತ್ತದೆ. ಜೀವ ದೇಹದ ಮೂಲಕ ಮಾಗುವ ಹಂತದಲ್ಲಿ ಸಾಗುತ್ತಿರುತ್ತದೆ. ಈ ಸಂದರ್ಭದ ಅಸ್ವಾಭಾವಿಕ ಬೇರ್ಪಡಿಸುವಿಕೆ ದೇಹ–ಜೀವಗಳೆರಡಕ್ಕೂ ಆನಂದ ತರುವುದಿಲ್ಲ. ಅಪೂರ್ಣತೆಯ ಕಾರಣದಿಂದಾಗಿ ಅತೃಪ್ತಿ ಪ್ರಧಾನವಾಗಿ ಕಾಡಿ ನೋವು ಸಂಕಟಗಳು ಸಾಯುವ ಸಂದರ್ಭದಲ್ಲಿ ಮುಖದಲ್ಲಿ ಕಾಣಿಸಿಕೊಳ್ಳುತ್ತವೆ.

ಹೆಸರಾಂತ ನಾಟಕಕಾರರಾಗಿದ್ದ, ಕವಿಗಳೂ ಆಗಿದ್ದ ನನ್ನ ವಿದ್ಯಾಗುರುಗಳಾದ ಪ್ರೊ.ಎಚ್.ಎಂ.ಚನ್ನಯ್ಯನವರು 'ವ್ಯಕ್ತಿಗೆ ಜನನ–ಮರಣಗಳ ಅನುಭವವಾಗುತ್ತದೆ. ಆದರೆ ಆ ಅನುಭವವನ್ನು ಅವನು ಅಭಿವ್ಯಕ್ತಿಸಲು ಅಸಮರ್ಥನಾಗುತ್ತಾನೆ. ತಾಯಿ ಗರ್ಭದಿಂದ ವ್ಯಕ್ತಿ ಈ ಜಗತ್ತಿಗೆ ಬರುವಾಗ ಆಗುವ ಅನುಭವವನ್ನು ನೆನಪಿಟ್ಟುಕೊಳ್ಳಲಾರ. ಏಕೆಂದರೆ ಅವನು ಮಗು. ಇನ್ನೂ ಪ್ರಜ್ಞೆ ಬೆಳೆದಿರುವುದಿಲ್ಲ. ಪ್ರಜ್ಞೆ ಬೆಳೆಯುವಷ್ಟರಲ್ಲಿ ಅದು ಮರೆತುಹೋಗಿರುತ್ತದೆ. ಸಾಯುವ ವ್ಯಕ್ತಿಗೆ ಸಾಯುವ ಸಂದರ್ಭದಲ್ಲಿ ಸಾವಿನ ಅನುಭವ ನಿಶ್ಚಿತವಾಗಿ ಆಗೇ ಆಗುತ್ತದೆ. ಆದರೆ ಅವನು ಆ ಕ್ಷಣದಲ್ಲಿ ಸತ್ತುಹೋಗುವುದರಿಂದ ಅವನು ಅದನ್ನು ಅಭಿವ್ಯಕ್ತಿಸಲಾಗುವುದೇ ಇಲ್ಲ' ಎಂದು ಹೇಳುತ್ತಿದ್ದರು. ಈ ಮಾತುಗಳು ಸತ್ಯವೆಂದು ಒಪ್ಪಿತವಾಗಲೇಬೇಕು. ಈ ಎರಡೂ ಸಂದರ್ಭದಲ್ಲಿ ಬದುಕಿನ ಅತ್ಯಂತ ಅಮೂಲ್ಯ ಎರಡು ಅನುಭವ ಸತ್ಯಗಳ ಗ್ರಹಿಕೆ ಮತ್ತು ಸಂವೇದನೆಯಾಗುತ್ತದೆ. ಆದರೆ ಅದರ ಅಭಿವ್ಯಕ್ತಿ ಅಸಾಧ್ಯವಾಗಿ ಆ ಸತ್ಯ ನಿಗೂಢವಾಗಿಯೇ ಉಳಿದು ಹೋಗುತ್ತದೆ!

■ ಶಿಕಾಕು

# ಮಾತೇ ಮುತ್ತು

★ ಇನ್ನೊಬ್ಬರ ಬಗ್ಗೆ ಇಲ್ಲಸಲ್ಲದ ಮಾತನಾಡುವವನು ನಿನ್ನ ಬಗ್ಗೆಯೂ ಹಾಗೆಯೇ ಮಾಡುತ್ತಾನೆ.

–ಸ್ಪ್ಯಾನಿಷ್ ಗಾದೆ

★ ನೆಲವೆ ಸಕಲ ಕುಲಕ್ಕೆ ತಾಯಿ ಅಲ್ಲವೇ? ನೆಲದ ಕುಲವನೇನಾದರೂ ಬಲ್ಲಿರಾ?

–ಕನಕದಾಸ

★ ರಾಷ್ಟ್ರೀಯತೆ ಮಾನವೀಯತೆಯ ಒಂದು ದಾರಿ.

–ಮ್ಯಾಕ್ ಐವರ್

★ ಆಡಿದ ನಂತರ ಮಾತು ನಿನ್ನನ್ನಾಳುವುದು; ಆಡದ ಮೊದಲು ನೀನು ಅದನ್ನಾಳುವೆ.

–ಅರಬ್ ಗಾದೆ

★ ಮಾನವ ಕೋಟಿ ಯುದ್ಧ ನಿಲ್ಲಿಸಬೇಕು; ಇಲ್ಲವಾದಲ್ಲಿ ಯುದ್ಧವು ಮಾನವ ಕೋಟಿಯನ್ನು ಕೊನೆಗಾಣಿಸುತ್ತದೆ.

–ಜೆ.ಎಫ್.ಕೆನಡಿ

★ ಸಹನೆ ಎಂಬ ಶಬ್ದವೇ ತಂದೆಯೆಂಬ ಅರ್ಥ.

–ಕೆ.ಎನ್.ಸಾಳುಂಕೆ, ನಾಟಕಕಾರ

★ ಹುಟ್ಟು, ಸಾವುಗಳ ಅಂಜಿಕೆಗಳು ಹೆತ್ತಂತ ಕೂಸು– ಮೋಕ್ಷ.

–ಶಿವರಾಮ ಕಾರಂತ

★ ಸೂಟಿನಂತೆ ಸಂವಿಧಾನವೂ ನಮಗೆ ಸರಿಯಾಗಿ ಹೊಂದಿಕೊಳ್ಳಬೇಕು. ಹೊಂದಿಕೊಳ್ಳದ ಸಂವಿಧಾನ ಖಂಡಿತವಾಗಿಯೂ ಸಂವಿಧಾನವೇ ಅಲ್ಲ, ಅದು ಸಂವಿಧಾನವಾಗಲಾರದು.

–ಬಿ.ಆರ್.ಅಂಬೇಡ್ಕರ್

★ ಪವಿತ್ರ ಭಾರತದಲ್ಲಿ ಹಿಂದುಗಳು, ಮುಸ್ಲಿಮರು, ಕ್ರೈಸ್ತರು, ಜೈನರು, ಸಿಖ್ಖರು... ಎಲ್ಲರೂ ಇದ್ದಾರೆ. ಆದರೆ ನಾನು ಹುಡುಕುತ್ತಿದ್ದೇನೆ ಮನಷ್ಯನನ್ನು... ದಯಮಾಡಿ ಹೇಳಿ ಅವನೆಲ್ಲಿದ್ದಾನೆ?

–ಜಿ.ಎಸ್.ಶಿವರುದ್ರಪ್ಪ

★ ರಾಷ್ಟ್ರೀಯತೆ ಒಂದು ದೊಡ್ಡ ಪಿಡುಗು!

–ರವೀಂದ್ರನಾಥ ಠಾಕೂರ್

★ ಈ ಪ್ರಪಂಚದಲ್ಲಿ ರಾಜಕಾರಣಿಗಳೇ ಇನ್ನೂ ಪ್ರಮುಖ ಸ್ಥಾನದಲ್ಲಿರುವುದು ದುರ್ದೈವದ ಸಂಗತಿಯಾಗಿದ್ದರೂ ನಿಜವಾದ ಸಂಗತಿ.

–ಜಾರ್ಜ್ ಬರ್ನಾಡ್ ಷಾ

★ ರಾಜಕಾರಣ ಅಂದ್ರೆ ಜನರ ಜೀವನದ ದಿಕ್ಕನ್ನು ಬದಲಾಯಿಸೋದು. ಅಂದ್ರೆ ಅವರು ಯೋಚಿಸುವ ಕ್ರಮವನ್ನು ಬದಲಾಯಿಸೋದು. ಅಂದ್ರೆ ಅವರನ್ನು ಒಲಿಸಿಕೊಳ್ಳೋದು.

–ಯು.ಆರ್.ಅನಂತಮೂರ್ತಿ

★ ರಾಷ್ಟ್ರವನ್ನು ಕಾನೂನಿನಿಂದ ಆಳಲಾಗುವುದಿಲ್ಲ; ಹಿಂಸೆಯಿಂದಲೂ ಸಾಧ್ಯವಿಲ್ಲ; ಅದು ಜನತೆಯ ಇಂಗಿತ ಅನುಸರಿಸುವುದರಿಂದ ಮಾತ್ರ ಸಾಧ್ಯ.

–ಎಡ್ಮಂಡ್ ಬರ್ಕ್

★ ರೈತನ ಬಾಳು ಸಣ್ಣದೆನಿಸಿದರೂ ಬಹುಕಾಲ ಬದುಕುವಂತಹುದು. ಅವನು ಯಾವಾಗಲೂ ಶ್ರೀಮಂತನಾಗಿರಲಾರ. ಆದರೆ ಸದಾ ಸಾಕಷ್ಟು ಅವನಲ್ಲಿರುತ್ತದೆ.

–ಲಿಯೋ ಟಾಲ್‌ಸ್ಟಾಯ್